# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1247
ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 19.12.2024
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ ಹಾಗೂ ಕಾವೇರಿ ಜಲ ನಿಯಂತ್ರಣಾ ಸಮಿತಿಯ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ತಗಲುವ ವೆಚ್ಚವನ್ನು ರಾಜ್ಯ ಸರ್ಕಾರ ಪ್ರತಿ ವರ್ಷ ಭರಿಸಬೇಕಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) ಇದ್ದಲ್ಲಿ, ರಾಜ್ಯ ಸರ್ಕಾರ ಭರಿಸಬೇಕಾದ ವೆಚ್ಚದ ಪಾಲು ಎಷ್ಟು; ಇದು ಪುನರಾವರ್ತಿತ ವೆಚ್ಚವೇ; | ಹೌದು.<br>ಕಾವೇರಿ ಜಲ ವಿವಾದ ನ್ಯಾಯಾಧೀಕರಣದ ದಿನಾಂಕ:05.02.2009 ರ ಆದೇಶವನ್ನು ಮಾರ್ಪಡಿಸಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:16.02.2018ರಂದು ನೀಡಿರುವ ಆದೇಶದ ಅನುಷ್ಠಾನಕ್ಕಾಗಿ ರಚಿಸಲಾಗಿರುವ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರದ (Cauvery Water Management Authority-CWMA) ಅಧಿಸೂಚನೆ ದಿನಾಂಕ:01.06.2018ರ ಕ್ರ.ಸಂ.14 (ii)ರಲ್ಲಿ ತಿಳಿಸಿರುವಂತೆ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ (CWMA) ಹಾಗೂ ಅದರ ಅಡಿಯಲ್ಲಿ ನಿರ್ವಹಿಸುವ ಕಾವೇರಿ ಜಲ ನಿಯಂತ್ರಣ ಸಮಿತಿ (CWRC)ಯ ಖರ್ಚು-ವೆಚ್ಚಗಳನ್ನು ಕೇರಳ, ಕರ್ನಾಟಕ, ತಮಿಳುನಾಡು ಹಾಗೂ ಪುದುಚೇರಿ ರಾಜ್ಯಗಳು 15:40:40:05ರ ಅನುಪಾತದಲ್ಲಿ ಭರಿಸಬೇಕಾಗಿರುತ್ತದೆ. ಸದರಿ ವೆಚ್ಚವು ಪುನರಾವರ್ತಿತ ವೆಚ್ಚವಾಗಿರುತ್ತದೆ. |
| ಆ) | ಸದರಿ ವೆಚ್ಚವನ್ನು ಯಾವ ವರ್ಷದಿಂದ ಪಾವತಿಸಿಕೊಂಡು ಬರುತ್ತಿದೆ; ಈವರೆವಿಗೂ ಪಾವತಿಸಿರುವ ಮೊತ್ತ ಎಷ್ಟು; (ವರ್ಷವಾರು ಪಾವತಿಸಿರುವ ಮೊತ್ತದ ಮಾಹಿತಿಯನ್ನು ನೀಡುವುದು) | 2018-19 ನೇ ಆರ್ಥಿಕ ವರ್ಷದಿಂದ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ (CWMA)ದ ಕೋರಿಕೆಯನ್ವಯ ಕಾವೇರಿ ನೀರಾವರಿ ನಿಗಮದಿಂದ ವೆಚ್ಚವನ್ನು ಭರಿಸಲಾಗುತ್ತಿದ್ದು, ವರ್ಷವಾರು ಭರಿಸಿರುವ ವೆಚ್ಚದ ವಿವರಗಳು ಈ ಕೆಳಕಂಡಂತಿವೆ: (see table below) |
| ಇ) | ಕಾವೇರಿ ನದಿ ನಿರ್ವಹಣಾ ಪ್ರಾಧಿಕಾರ ಹಾಗೂ ಕಾವೇರಿ ಜಲ ನಿಯಂತ್ರಣಾ ಸಮಿತಿಗೆ ಮಾಹಿತಿ ಹಾಗೂ ಅಂಕಿಅಂಶಗಳನ್ನು ಒದಗಿಸಲು ಸಮಿತಿಯನ್ನು ರಚಿಸಲಾಗಿದೆಯೇ; ಇದ್ದಲ್ಲಿ, ಈ ಸಮಿತಿಯಲ್ಲಿ ಯಾರು ಯಾರು ಇದ್ದಾರೆ? (ಸಮಿತಿಯ ಕಾರ್ಯನಿರ್ವಹಣೆ ಕುರಿತು ಸಂಪೂರ್ಣ ಮಾಹಿತಿ ನೀಡುವುದು) | ಯಾವುದೇ ಸಮಿತಿ ರಚಿಸಲಾಗಿರುವುದಿಲ್ಲ. |

| ವರ್ಷ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|
| 2018-19 | 80.00 |
| 2019-20 | - |
| 2020-21 | 320.00 |
| 2021-22 | 320.00 |
| 2022-23 | 400.00 |
| 2023-24 | 480.00 |
| 2024-25 | 380.00 |

ಸಂಖ್ಯೆ: ಜಸಂಇ 79 ಕಾವಿಇ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ